ಜೊಲ್ಲೆ ಉದ್ಯೋಗ ಸಮೂಹ

ವಾರ್ತಾ ಪತ್ರ

(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)

ಅಕ್ಟೋಬರ 2022-ಸಂಪುಟ-6 ಸಂಚಿಕೆ-11

# ದರ್ಪಣ



ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಸನ್ಮಾನ್ಯ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ, ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವ-2022ರ ಉದ್ಘಾಟನಾ ಕಾರ್ಯಕ್ರಮಕ್ಕೆ ಆಹ್ವಾನ ನೀಡುತ್ತಿರುವ ದೃಶ್ಯ.

ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ)

ಕ್ರಿಯಾತ್ಮಕ ಹಾಗೂ ಪ್ರಗತಿಶೀಲ ಅರ್ಥವ್ಯವಸ್ಥೆ




# ಶಿಕ್ಷಕರ ದಿನಾಚರಣೆ-2022

ಪ್ರತಿ ವ್ಯಕ್ತಿಯೂ ತಮ್ಮ ಜೀವನದಲ್ಲಿ ತಂದೆ ತಾಯಿಯ ನಂತರದ ಸ್ಥಾನವನ್ನು ಒಬ್ಬ ಗುರುವಿಗೆ ನೀಡುತ್ತಾರೆ. ಉತ್ತಮ ಶಿಕ್ಷಣ ನೀಡುವುದರ ಜೊತೆಗೆ, ಶಿಕ್ಷಣದ ಮೂಲಾರ್ಥವನ್ನು ತಿಳಿಸಿ ಪ್ರತಿ ವ್ಯಕ್ತಿಯ ಬದುಕನ್ನು ಬೆಳಗುವವರು ಶಿಕ್ಷಕರಾಗಿರುವುದರಿಂದ, ಇಡೀ ಪ್ರಪಂಚವೇ ಅವರನ್ನು ಅಗ್ರಸ್ಥಾನದಲ್ಲಿಟ್ಟು ಪೂಜಿಸುತ್ತದೆ.

ಪ್ರತಿ ವರ್ಷ ಶಿಕ್ಷಕರ ದಿನಾಚರಣೆಯನ್ನು ಸೆಪ್ಟೆಂಬರ್ 5 ರಂದು ಆಚರಿಸಲಾಗುತ್ತದೆ. ಪ್ರಸಿದ್ಧ ವಿದ್ವಾಂಸ, ಭಾರತ ರತ್ನ ಪುರಸ್ಕೃತ, ಮೊದಲ ಉಪರಾಷ್ಟ್ರಪತಿ ಮತ್ತು ಸ್ವತಂತ್ರ ಭಾರತದ ಎರಡನೇ ರಾಷ್ಟ್ರಪತಿ ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ನೆನಪಿಗಾಗಿ ಆಚರಿಸಲಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ಜೀವನದಲ್ಲಿ ಏನನ್ನಾದರೂ ಸಾಧನೆ ಮಾಡಬೇಕು ಎಂದರೆ ಅವನ ಹಿಂದೆ ಪ್ರಮುಖ ಪಾತ್ರ ವಹಿಸುವುದು ಒಬ್ಬ ಗುರು. ಪ್ರತಿಯೊಬ್ಬರಿಗೂ ಶಿಕ್ಷಣ ಹೇಗೆ ಮುಖ್ಯವೋ, ಹಾಗೇಯೆ ಆ ಶಿಕ್ಷಣ ನೀಡುವ ಗುರುವು ಅಷ್ಟೇ ಮುಖ್ಯ. ಗುರುವಿಲ್ಲದೆ ಗುರಿಯನ್ನು ತಲುಪುವುದು ಬಹಳ ಕಷ್ಟ. ಭರವಸೆಯನ್ನು ಹೆಚ್ಚಿಸುವ, ಕನಸನ್ನು ಸಾಕಾರಗೊಳಿಸುವ, ಕಲಿಕಾ ಆಸಕ್ತಿಯನ್ನು ಹುಟ್ಟು ಹಾಕುವ ಸೂತ್ರಧಾರನೇ ಶಿಕ್ಷಕ ಎಂದರೆ ತಪ್ಪಾಗಲಾರದು.

### ಶಿಕ್ಷಕರ ದಿನಾಚರಣೆಯ ಇತಿಹಾಸ

ರಾಧಾಕೃಷ್ಣನ ಅತ್ಯುತ್ತಮ ಶಿಕ್ಷಕ, ತತ್ವಜ್ಞಾನಿ ಮತ್ತು ರಾಷ್ಟ್ರಪತಿ, ಉಪರಾಷ್ಟ್ರಪತಿ ಆಗಿದ್ದರು. ಅವರು 1952 ರಿಂದ 1962 ರವರೆಗೆ ಭಾರತದ ಮೊದಲ ಉಪರಾಷ್ಟ್ರಪತಿಗಳಾಗಿ ಸೇವೆ ಸಲ್ಲಿಸಿದರು. ಮತ್ತು 1962 ರಲ್ಲಿ ಭಾರತದ ಎರಡನೇಯ ರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸಿದರು. ಮೊದಲ ಶಿಕ್ಷಕರ ದಿನಾಚರಣೆಯನ್ನು ಸೆಪ್ಟೆಂಬರ್ 5, 1962 ರಂದು ಆಚರಿಸಲಾಯಿತು. ಅಂದಿನಿಂದ ಇಂದಿನವರೆಗೂ ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನವನ್ನು ಆಚರಣೆ ಮಾಡಲಾಗುತ್ತಿದ್ದು, ಈ ದಿನವನ್ನು ಶಿಕ್ಷಕರಿಗಾಗಿ ಮೀಸಲಿಡಲಾಗಿದೆ.

### ಶಿಕ್ಷಕರ ದಿನದ ಮಹತ್ವ

ಒಬ್ಬ ವ್ಯಕ್ತಿಯನ್ನು ಸಮಾಜದಲ್ಲಿ ಒಳ್ಳೆಯ ವ್ಯಕ್ತಿಯಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದಾಗಿದೆ. ಗುರುಕುಲ ಶಿಕ್ಷಣ ದಿಂದ ಹಿಡಿದು ಇಂದಿನ ಶಿಕ್ಷಣದವರೆಗು ಶಿಕ್ಷಕರು ಇತರರ ಜೀವನವನ್ನು ರೂಪಿಸಲು ತಮ್ಮನ್ನು ತಾವು ಅರ್ಪಿಸಿಕೊಳ್ಳುತ್ತಿದ್ದಾರೆ. ಅವರು ವ್ಯಕ್ತಿಯ ಆತ್ಮ ವಿಶ್ವಾಸ, ಬದಕನ್ನು ಬಲಪಡಿಸುತ್ತಾರೆ. ಜೀವನದ ಪ್ರತಿಯೊಂದು ತಪ್ಪು, ಒಪ್ಪುಗಳನ್ನು ತಿದ್ದಿ ತೀಡಿ ಮತ್ತು ಜವಾಬ್ದಾರಿಯ ಬಗ್ಗೆ ಕಲಿಸಿ ಕೊಡುತ್ತಾರೆ. ವಿದ್ಯಾರ್ಥಿಗಳ ಜೀವನ ಎಂದಿಗೂ ಹಸನಾಗಿರಲಿ ಎಂದು ತುಂಬು ಹೃದಯದಿಂದ ಹಾರೈಸಿ, ಅದಕ್ಕೆ ಪೂರಕವಾದ ಶಿಕ್ಷಣವನ್ನು ನೀಡುತ್ತಾರೆ. ಹಾಗಾಗಿ ಇಷ್ಟೆಲ್ಲಾ ಜೀವನದ ಪಾಠಗಳನ್ನು ಕಲಿಸಿಕೊಡುವ ಶಿಕ್ಷಕರಿಗೆ ಒಂದು ಸಣ್ಣ ಧನ್ಯವಾದಗಳನ್ನು ಅರ್ಪಿಸುವ ಸಲುವಾಗಿ ಈ ದಿನವನ್ನು ಆಚರಣೆ ಮಾಡಲಾಗುತ್ತದೆ.

### ಶಾಲೆಗಳಲ್ಲಿ ವಿವಿಧ ಕಾರ್ಯಕ್ರಮಗಳು

ವಿದ್ಯಾರ್ಥಿಯ ಜೀವನದಲ್ಲಿ ಪ್ರತಿಯೊಂದು ಅಂಶಗಳನ್ನು ತಿದ್ದಿ ತೀಡಿ ಅವರ ಜವಾಬ್ದಾರಿಯ ಬಗ್ಗೆ ಶಿಕ್ಷಕರು ಕಲಿಸುತ್ತಾರೆ. ವಿದ್ಯಾರ್ಥಿಗಳ ಬದಕು ಯಾವಾಗಲು ಹಸನಾಗಿರಲಿ ಎಂದು ಶ್ರಮಿಸುವ ಅವರು, ವಿದ್ಯಾರ್ಥಿಗಳಿಂದ ಯಾವುದೇ ಅಪೇಕ್ಷೆಯನ್ನು ಬಯಸುವುದಿಲ್ಲ. ಅಂತಹ ಶಿಕ್ಷಕರಿಗೆ ಗೌರವ ಸಲ್ಲಿಸುವ ಸಲುವಾಗಿ ಈ ದಿನವನ್ನು ಆಚರಿಸಲು ವಿವಿಧ ಶಿಕ್ಷಣ ಸಂಸ್ಥೆಗಳು, ಶಾಲೆಗಳಲ್ಲಿ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಈ ದಿನ ವಿದ್ಯಾರ್ಥಿಗಳು ತಮ್ಮ ಶಿಕ್ಷಕರಿಗೆ ವಿಶೇಷ ಉಡುಗೊರೆಗಳನ್ನು ಸಹ ನೀಡಿ ಶುಭಾಶಯ ತಿಳಿಸಿ ಖುಷಿ ಪಡುತ್ತಾರೆ.

### ಸರ್ವೆಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನ

ಪ್ರತಿ ವರ್ಷ ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನಾಚರಣೆಯನ್ನು ಆಚರಣೆ ಮಾಡಲಾಗುತ್ತದೆ. ಶಿಕ್ಷಕರ ದಿನವನ್ನು ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದಂದು ಆಚರಿಸಲಾಗುತ್ತದೆ. ಇವರು ಸೆಪ್ಟೆಂಬರ್ 5, 1888 ರಂದು ತಮಿಳುನಾಡಿನ ತಿರುತ್ತಣಿ ಎಂಬಲ್ಲಿ ಜನಿಸಿದರು. ಸರ್ವೆಪಲ್ಲಿ ಎನ್ನುವುದು ರಾಧಾಕೃಷ್ಣನ್ ಮನೆತನದ ಹೆಸರು, ರಾಧಾಕೃಷ್ಣನ್ ಎನ್ನುವುದು ಅವರ ತಂದೆ-ತಾಯಿ ಇಟ್ಟ ಮುದ್ದಿನ ಹೆಸರು. ರಾಧಾಕೃಷ್ಣನ್ ಅವರು ಭಾರತದ ಮೊದಲ ಉಪರಾಷ್ಟ್ರಪತಿಯಾಗಿ, ಭಾರತದ ಎರಡನೇ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದ್ದಾರೆ.

### ಶಿಕ್ಷಕರ ದಿನದ ಹಿಂದಿದೆ ರೋಚಕ ಕಥೆ

ಪ್ರತಿ ವರ್ಷ ಸರ್ವೆಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನವಾದ ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನವನ್ನು ಆಚರಿಸಲಾಗುತ್ತದೆ ಎನ್ನುವುದು ಎಲ್ಲರಿಗೂ ತಿಳಿದ ವಿಚಾರವಾಗಿದೆ. ಆದರೆ ಈ ದಿನದಂದೇ ಯಾಕೆ ಶಿಕ್ಷಕರ ದಿನವನ್ನು ಆಚರಣೆ ಮಾಡಲಾಗುತ್ತದೆ ಎನ್ನುವುದು ಕುರಿತು ಒಂದು ಕುತೂಹಲಕಾರಿ ಸಂಗತಿ ಇದೆ. ಒಮ್ಮೆ ವಿದ್ಯಾರ್ಥಿಗಳು ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನವನ್ನು ಆಚರಿಸಲು ಕೇಳಿಕೊಂಡರು. ಇದಕ್ಕೆ ಉತ್ತರಿಸಿದ ರಾಧಾಕೃಷ್ಣನ್ ಅವರು ನನ್ನ ಜನ್ಮದಿನವನ್ನು ಭಿನ್ನವಾಗಿ ಆಚರಿಸಿ ಎಂದರಂತೆ. ನನ್ನ ಜನ್ಮದಿನವನ್ನು ಆಚರಿಸಲು ಬಯಸಿರುವುದು ಒಳ್ಳೆಯದು. ಆದರೆ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರು ನೀಡಿದ ಕೊಡುಗೆ ಮತ್ತು ಸಮರ್ಪಣೆಯನ್ನು ಗೌರವಿಸುವ ಮೂಲಕ ನೀವು ನನ್ನ ಜನ್ಮ ದಿನವನ್ನು ಆಚರಿಸಿದರೆ ನನಗೆ ಅತ್ಯಂತ ಸಂತೋಷವಾಗುತ್ತದೆ ಎಂದಿದ್ದರು. ಸರ್ವೆಪಲ್ಲಿ ರಾಧಾಕೃಷ್ಣನ್ ಅವರ ಈ ಮಾತನ್ನು ಗೌರವಿಸಿ ಪ್ರತಿ ವರ್ಷ ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನವನ್ನು ಆಚರಣೆ ಮಾಡಲಾಗುತ್ತದೆ.

# ಪ್ರಸ್ತುತ ದಿನಗಳಲ್ಲಿ ಯುವಜನತೆಯ ತೊಳಲಾಟ, ಸ್ಥಿತಿಗತಿ ಮತ್ತು ಸಮಾಜ ಕಾರ್ಯದ ಮಧ್ಯಸ್ಥಿಕೆ

ಪ್ರಪಂಚದ ಐವರಲ್ಲಿ ಒಬ್ಬ ವ್ಯಕ್ತಿ 15 ರಿಂದ 24 ವರ್ಷ ವಯಸ್ಸಿನವನಾಗಿದ್ದಾನೆ, ಹೆಚ್ಚಿನವರು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ವಾಸಿಸುತ್ತಿದ್ದಾರೆ.ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಯುವಜನತೆಯನ್ನು ಹೊಂದಿದ ರಾಷ್ಟ್ರವಾಗಿದೆ. ಒಟ್ಟು ಜನಸಂಖ್ಯೆಯ ಸುಮಾರು 66 ಪ್ರತಿಶತದಷ್ಟು (808 ಮಿಲಿಯನ್‌ಗಿಂತಲೂ ಹೆಚ್ಚು) 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರು. ಭಾರತೀಯ ಜನಸಂಖ್ಯೆಯ ಸುಮಾರು 40 ಪ್ರತಿಶತದಷ್ಟು ಜನರು 13 ರಿಂದ 35 ವರ್ಷ ವಯಸ್ಸಿನವರಾಗಿದ್ದಾರೆ. (ರಾಷ್ಟ್ರೀಯ ಯುವ ನೀತಿಯಲ್ಲಿ ಈ ವಯಸ್ಸಿನವರನ್ನು ಯುವಕರು ಎಂದು ವ್ಯಾಖ್ಯಾನಿಸಲಾಗಿದೆ).ಭಾರತದಲ್ಲಿ ಯುವಜನತೆಯೇ ಹೆಚ್ಚಿರುವುದರಿಂದ ಭಾರತವನ್ನು ಯುವ ರಾಷ್ಟ್ರ ಎಂದು ಕರೆಯಲಾಗಿದೆ.

ಮುಂಬರುವ ದಶಕದಲ್ಲಿ ಭಾರತೀಯ ಕಾರ್ಮಿಕ ಬಲವು ವಾರ್ಷಿಕವಾಗಿ 8 ಮಿಲಿಯನ್‌ಗಿಂತಲೂ ಹೆಚ್ಚು ಬೆಳೆಯಲಿದೆ, ಅದರಲ್ಲಿ ಹೆಚ್ಚಿನವು ಕಾರ್ಮಿಕ ಮಾರುಕಟ್ಟೆಯನ್ನು ಪ್ರವೇಶಿಸುವ ಯುವಕರಿಂದ ಪ್ರೇರೇಪಿಸಲ್ಪಡುತ್ತವೆ. ಹೆಚ್ಚುತ್ತಿರುವ ವಿದ್ಯಾವಂತ ಸಮೂಹಗಳಿಗೆ ಯೋಗ್ಯವಾದ ಕೆಲಸವನ್ನು ರಚಿಸುವ ವಿಷಯದಲ್ಲಿ ನೀತಿ ನಿರೂಪಕರಿಗೆ ಇದು ಒಂದು ಪ್ರಮುಖ ಸವಾಲಾಗಿದೆ. ಜಾಗತಿಕವಾಗಿ ಯುವಕರು ನಿರುದ್ಯೋಗಿಗಳಾಗಲು ವಯಸ್ಕರಿಗಿಂತ ಮೂರು ಪಟ್ಟು ಹೆಚ್ಚು. ಯುವತಿಯರು ಸಾಮಾನ್ಯವಾಗಿ ಪುರುಷರಿಗಿಂತ ಹೆಚ್ಚಿನ ನಿರುದ್ಯೋಗವನ್ನು ಅನುಭವಿಸುತ್ತಾರೆ. ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಪ್ರಪಂಚದಾದ್ಯಂತ ಯುವಕರು ಕಾರ್ಮಿಕ ಮಾರುಕಟ್ಟೆಯಲ್ಲಿ ಅವರ ಅನಿಶ್ಚಿತತೆಯಿಂದಾಗಿ ಹೆಚ್ಚು ಹಾನಿಗೊಳಗಾದವರು ಎಂದು ತಿಳಿಯಬಹುದು.

2009/10 ರಲ್ಲಿ ಭಾರತದಲ್ಲಿ ಶೇಕಡಾ 9.7 ರಷ್ಟು ಯುವಕರು ಮತ್ತು ಶೇಕಡಾ 18.7 ರಷ್ಟು ಯುವತಿಯರು ನಿರುದ್ಯೋಗಿಗಳಾಗಿದ್ದರು. ಹೋಲಿಸಿದರೆ, 30–34 ವರ್ಷ ವಯಸ್ಸಿನ ಭಾರತೀಯರ ನಿರುದ್ಯೋಗ ದರವು ಕ್ರಮವಾಗಿ ಪುರುಷರು ಮತ್ತು ಮಹಿಳೆಯರಿಗೆ ಕೇವಲ 1.2 ಮತ್ತು 3.4 ಪ್ರತಿಶತವನ್ನು ತಲುಪಿದೆ.

ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹೆಚ್ಚಿನ ಯುವಕರು ದೀರ್ಘಕಾಲ ನಿರುದ್ಯೋಗಿಗಳಾಗಿ ಉಳಿಯಲು ಸಾಧ್ಯವಿಲ್ಲ ಆದರೆ, ಅದೇ ಸಮಯದಲ್ಲಿ, ಔಪಚಾರಿಕ ಆರ್ಥಿಕತೆಯಲ್ಲಿ ಯೋಗ್ಯವಾದ ಉದ್ಯೋಗಗಳನ್ನು ಹುಡುಕಲು ಹೆಣಗಾಡುತ್ತಾರೆ. ಪರಿಣಾಮವಾಗಿ, ಹೆಚ್ಚಿನ ಯುವಕರು ಕಡಿಮೆ ಉದ್ಯೋಗದಲ್ಲಿದ್ದಾರೆ ಮತ್ತು ಅನೌಪಚಾರಿಕ ವಲಯದಲ್ಲಿ ಜೀವನ ಸಾಗಿಸುತ್ತಿದ್ದಾರೆ.ಆದರೂ ಯುವಕರು ಎಂದರೆ ಯಾರು? ಅವರ ಸಮಸ್ಯೆಗಳೇನು? ಸಮಾಜ ಕಾರ್ಯದ ದೃಷ್ಟಿಯಿಂದ ನಾವು ಏನೇನು ಮಾಡಬಹುದು ಎಂಬುದರ ಬಗ್ಗೆ ಚರ್ಚಿಸೋಣ.

### ಯುವಕರು ಎಂದರೆ ಯಾರು?

1) ಯುನೆಸ್ಕೋ ಪ್ರಕಾರ ಯುವಕರು ಎಂದರೆ 15–24 ವರ್ಷ ವಯಸ್ಸಿನ ಜನರು
2) ಭಾರತ ಸರ್ಕಾರದ ಪ್ರಕಾರ ಯುವಕರು ಎಂದರೆ 15–36 ವರ್ಷ ವಯಸ್ಸಿನ ಜನರು (ಯುವ ಮತ್ತು ಕ್ರೀಡಾ ಸಚಿವಾಲಯ – 2003)
3) ಮನೋವಿಜ್ಞಾನ ಮತ್ತು ಶರೀರ ಶಾಸ್ತ್ರಜ್ಞರ ಪ್ರಕಾರ ಬಾಲ್ಯದ ನಂತರ ಮತ್ತು ವಯಸ್ಕಾವಧಿಯ ನಡುವಿನ ಮಾನವ ಜೀವನದ ಅವಧಿ.

ಪ್ರಸ್ತುತವಾಗಿ ಯುವಕರು ಒಂದಿಲ್ಲಾ ಒಂದು ಸಮಸ್ಯೆಯ ಸುಳಿಯಲ್ಲಿ ಸಿಲುಕಿಕೊಳ್ಳುತ್ತಿರುವುದು ಸಾಮಾನ್ಯ. ಸಾಮಾನ್ಯವಾಗಿ ಯುವಕರು ಎದುರಿಸುತ್ತಿರುವ ಸಮಸ್ಯೆಗಳೆಂದರೆ ಧರ್ಮದೊಂದಿಗೆ ಘರ್ಷಣೆಗಳು, ನಿರುದ್ಯೋಗ, ಬಡತನ, ಪೋಷಕರ ಒತ್ತಡ, ಅಪ್ರಾಪ್ತ ವಯಸ್ಸಿನ ಲೈಂಗಿಕತೆ, ಖಿನ್ನತೆ ಮತ್ತು ಆತ್ಮಹತ್ಯೆ, ಹತಾಶೆ, ಆಕರ್ಷಣೆ ಕಾನೂನುಬಾಹಿರ ಚಟುವಟಿಕೆಗಳು – ಭಯೋತ್ಪಾದನೆ, ಭ್ರಷ್ಟಾಚಾರ, ಸಮಯ ನಿರ್ವಹಣೆಯ ಸಮಸ್ಯೆ, ಲೈಂಗಿಕ ಸಮಸ್ಯೆಗಳು, ಶಾಲೆ ಮತ್ತು ಕಾಲೇಜುಗಳಲ್ಲಿ ರ್ಯಾಗಿಂಗ್, ಮಾದಕ ವಸ್ತು ಸೇವನೆ, ಪೋಷಕರೊಂದಿಗೆ ಸಂಘರ್ಷ, ಸಾಮಾಜಿಕ ಮಾಧ್ಯಮಗಳ ದಾಸರಾಗುವಿಕೆ ಮತ್ತು ಸೈಬರ್ ಅಪರಾಧಗಳು, ಪ್ರೀತಿ ಪ್ರೇಮಕ್ಕೆ ದಾಸರಾಗುವುದು, ನಿರ್ಧಾರ ಕೈಗೊಳ್ಳುವಲ್ಲಿ ಗೊಂದಲ, ಶೈಕ್ಷಣಿಕ ಸಮಸ್ಯೆಗಳು, ಅಕ್ರಮ ಸಂಬಂಧಗಳು ಇತ್ಯಾದಿ.

### ಯುವಕರಿಗಾಗಿ ಸಮಾಜ ಕಾರ್ಯಗಳ ಮಧ್ಯಸ್ಥಿಕೆ ಚಟುವಟಿಕೆಗಳು

1) ಸಮಾಜ ಕಾರ್ಯಕರ್ತರು ಯುವಕರನ್ನು ಅರ್ಥೈಸಿಕೊಳ್ಳುವುದು ಮತ್ತು ಯುವಕರ ವೈಯಕ್ತಿಕ ಮತ್ತು ಸಾಮಾಜಿಕ ಬೇಡಿಕೆಗಳನ್ನು ಪೂರೈಸುವ ಸಾಮರ್ಥ್ಯ ಮತ್ತು ಶಕ್ತಿಯನ್ನು ನಿರ್ಮಿಸಲು ಕಾರ್ಯ ಮಾಡುವುದು.
2) ಯುವಕರನ್ನು ಅಭಿವೃದ್ಧಿಪಡಿಸಲು ಅಥವಾ ಯುವಜನರನ್ನು ಸಮುದಾಯದ ಅಭಿವೃದ್ಧಿ ಮತ್ತು ರಾಷ್ಟ್ರ ನಿರ್ಮಾಣದ ಕುರಿತು ಪ್ರೇರೇಪಿಸಲು ಸಮಾಜಕಾರ್ಯಕರ್ತರು ಸಮಾಜ ಕಾರ್ಯದ ಎಲ್ಲಾ ವಿಧಾನಗಳನ್ನು ಬಳಸಿಕೊಳ್ಳುವುದು.
3) ಯುವಕರ ಸಾಮಾಜಿಕ, ಭಾವನಾತ್ಮಕ, ಆಧ್ಯಾತ್ಮಿಕ ಮತ್ತು ಮಾನಸಿಕ ಯೋಗಕ್ಷೇಮವನ್ನು ಉತ್ತೇಜಿಸುವುದು.
4) ಸಮಾಜ ಕಾರ್ಯಕರ್ತರು ಯುವಜನರ ಅಭಿವೃದ್ಧಿಗೆ ಅವಕಾಶಗಳನ್ನು ಸೃಷ್ಟಿಸುವುದರ ಜೊತೆಗೆ ಅವರನ್ನು ಸ್ವಾವಲಂಬಿತನವನ್ನು ವ್ಯಕ್ತಪಡಿಸುವ ಅವಕಾಶಗಳತ್ತ ಗಮನ ಹರಿಸುವುದು.
5) ಸಮಾಜ ಕಾರ್ಯಕರ್ತರು ಯುವಕರಿಗೆ ತಮ್ಮ ಸಾಮರ್ಥ್ಯವನ್ನು ವ್ಯಕ್ತಪಡಿಸಲು ಮತ್ತು ತೋರಿಸಲು ಅವಕಾಶವನ್ನು ಒದಗಿಸುವುದು.
6) ಯುವಕರಿಗೆ ಸರ್ಕಾರದ ಎಲ್ಲಾ ಭಾಗಗಳಲ್ಲಿ ಭಾಗವಹಿಸಲು ಮತ್ತು ನಿರ್ಧಾರ ತೆಗೆದುಕೊಳ್ಳುವ ಸ್ಥಿತಿಗೆ ಅವಕಾಶವನ್ನು ಒದಗಿಸುವುದು.
7) ರಾಜಕೀಯ, ಯೋಜನೆ, ನೀತಿ ರಚನೆ ಇತ್ಯಾದಿಗಳಲ್ಲಿ ಭಾಗವಹಿಸಲು ಸಮಾಜ ಕಾರ್ಯಕರ್ತರು ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ನಡೆಸುವುದು.
8) ಸಮಾಜ ಕಾರ್ಯಕರ್ತರು ಯುವಕರ ಅಗತ್ಯತೆಗಳು ಮತ್ತು ಅಭಿವೃದ್ಧಿಗಾಗಿ ಯುವಕರ ಅಗತ್ಯಗಳನ್ನು ಕಂಡುಹಿಡಿಯಲು ಸಂಶೋಧನೆ ಮತ್ತು ಸಮೀಕ್ಷೆಯನ್ನು ನಡೆಸಬೇಕು ಮತ್ತು ನಂತರ ಅವರು ಯುವಕರಿಗೆ ನಿಜವಾಗಿಯೂ ಪ್ರಸ್ತುತವಾದ ಕಾರ್ಯಕ್ರಮಗಳನ್ನು ರೂಪಿಸುವುದು.
9) ಸೂಕ್ತ ಆಪ್ತಸಮಾಲೋಚನೆ ಮತ್ತು ಸಾಂತ್ವನ ಒದಗಿಸುವುದು.
10) ವೈಯಕ್ತಿಕ ಕಾಳಜಿವಹಿಸುವುದು.
11) ಯುವಕರಲ್ಲಿ ನಾಯಕತ್ವದ ಕೌಶಲ್ಯಗಳನ್ನು ಬೆಳೆಸುವುದು.
12) ಯುವಕರಿಗಾಗಿ ವ್ಯಕ್ತಿತ್ವ ವಿಕಸನ ಮತ್ತು ಸಂವಹನ ಕೌಶಲ್ಯ ಕಾರ್ಯಕ್ರಮಗಳನ್ನು ನಡೆಸುವುದು
13) ವಿವಿಧ ಕೌಶಲ್ಯ ಅಭಿವೃದ್ಧಿ ಮತ್ತು ವೃತ್ತಿಪರ ತರಬೇತಿ ಕಾರ್ಯಕ್ರಮಗಳನ್ನು ಒದಗಿಸುವುದು.
14) ಸರ್ಕಾರದ ಸೌಲಭ್ಯಗಳು ಮತ್ತು ಮಾನೋ–ಸಾಮಾಜಿಕ ಸಮಸ್ಯೆಗಳ ಪರಿಹಾರಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವುದು.
15) ಉದ್ಯೋಗ ಮೇಳಗಳನ್ನು ಆಯೋಜಿಸುವುದು.
16) ಅಗತ್ಯ ಆಧಾರಿತ ಕಾರ್ಯಕ್ರಮಗಳನ್ನು ಒದಗಿಸುವುದು.
17) ಯುವ ಸ್ನೇಹಿ ಕಾರ್ಯಕ್ರಮಗಳು ಮತ್ತು ನೀತಿಗಳನ್ನು ಅಳವಡಿಸಿಕೊಳ್ಳಲು ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡುವುದು.
18) ತಂಡ ಕಾರ್ಯಕ್ಕೆ ಸಂಬಂಧಿಸಿದ ರಚನಾತ್ಮಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.
19) ಜೀವನ ಕೌಶಲ್ಯಗಳ ಅನ್ವಯಕ್ಕೆ ಪ್ರೋತ್ಸಾಹಿಸುವುದು.

ಯುವಕರ ಸಬಲೀಕರಣಕ್ಕೆ ಸರ್ಕಾರ ಕೈಗೊಂಡಿರುವ ಯುವ ಕಲ್ಯಾಣ ಕಾರ್ಯಕ್ರಮಗಳೆಂದರೆ ಪ್ರಧಾನ ಮಂತ್ರಿಗಳ ಆರ್ಥಿಕ ಸಬಲೀಕರಣ ಯೋಜನೆ – ಬ್ಯಾಂಕ್ ಖಾತೆ (PMJDY), ಪ್ರಧಾನ ಮಂತ್ರಿಗಳ ವೈಯಕ್ತಿಕ ಅಪಘಾತ ಸಂರಕ್ಷಣಾ ಯೋಜನೆ (PMSBY), ಪ್ರಧಾನ ಮಂತ್ರಿಯವರ ವೈಯಕ್ತಿಕ ಜೀವ ಸಂರಕ್ಷಣಾ ಯೋಜನೆ (PMJJBY), ಪ್ರಧಾನ ಮಂತ್ರಿಗಳ ಸಣ್ಣ ಮತ್ತು ಸೂಕ್ಷ್ಮ ಕೈಗಾರಿಕೆಗಳ ಅಭಿವೃದ್ಧಿ ಯೋಜನೆ (PMMY), ಪ್ರಧಾನ ಮಂತ್ರಿಯವರ ಡಿಜಿಟಲ್ ಇಂಡಿಯಾ ಉಪಕ್ರಮ, ಪ್ರಧಾನ ಮಂತ್ರಿ ಯುವ ವೃತ್ತಿ ಅಭಿವೃದ್ಧಿ ಯೋಜನೆ (PMKVY), ಪ್ರಧಾನಮಂತ್ರಿಯವರ ಹೊಸ ಉದ್ಯಮಿಗಳ ಅಭಿವೃದ್ಧಿ ಯೋಜನೆ (ಸ್ಟಾರ್ಟಪ್ ಇಂಡಿಯಾ), ಅಲ್ಪಸಂಖ್ಯಾತ ಯುವ ಸಬಲೀಕರಣ, ಅಲ್ಪಸಂಖ್ಯಾತ ಯುವಕರಿಗೆ ಶಿಕ್ಷಣ ವಿದ್ಯಾರ್ಥಿವೇತನ (ಮೆರಿಟ್ ವಿದ್ಯಾರ್ಥಿಗಳು)

ಇನ್ನು ಇತರ ಕಾರ್ಯಕ್ರಮಗಳು ಮತ್ತು ಸಂಘಟನೆಗಳು ಯುವಕರ ಕಲ್ಯಾಣಕ್ಕೆ ಶ್ರಮಿಸುತ್ತಿದೆ. ಅವುಗಳೆಂದರೆ ನೆಹರು ಯುವ ಕೇಂದ್ರ ಸಂಘಟನೆ NYKS, ನ್ಯಾಷನಲ್ ಯೂತ್ ಕಾರ್ಪ್ಸ್ (NYC), ಯುವ ಮತ್ತು ಹದಿಹರೆಯದವರ ಅಭಿವೃದ್ಧಿಗಾಗಿ ರಾಷ್ಟ್ರೀಯ ಕಾರ್ಯಕ್ರಮ (NPYAD), ಅಂತರಾಷ್ಟ್ರೀಯ ಸಹಕಾರ, ಯುವ ವಸತಿ ನಿಲಯಗಳು (YH), ಸ್ಕೌಟಿಂಗ್ ಮತ್ತು ಗೈಡಿಂಗ್ ಸಂಸ್ಥೆಗಳಿಗೆ ಸಹಾಯ, ರಾಷ್ಟ್ರೀಯ ಶಿಸ್ತು ಯೋಜನೆ (NDS), ರಾಷ್ಟ್ರೀಯ ಯುವ ನಾಯಕರ ಕಾರ್ಯಕ್ರಮ (NYLP), ರಾಷ್ಟ್ರೀಯ ಸೇವಾ ಯೋಜನೆ (NSS) ರಾಷ್ಟ್ರೀಯ ಸೇವಾ ಯೋಜನೆ (NSS), ರಾಜೀವ್ ಗಾಂಧಿ ರಾಷ್ಟ್ರೀಯ ಯುವ ಅಭಿವೃದ್ಧಿ ಸಂಸ್ಥೆ (RGNIYD)ಮುಂತಾದವು.

ಒಟ್ಟಾರೆಯಾಗಿ ಹೇಳುವುದಾದರೆ ಯುವಶಕ್ತಿ ದೇಶದ ನಿಜವಾದ ಆಸ್ತಿಯಾಗಿದ್ದು, ಯುವಕರ ಸಬಲೀಕರಣ, ಸಮಸ್ಯೆಮುಕ್ತ ಕೌಶಲ್ಯ ಯುಕ್ತ ಸಂತೋಷಭರಿತ ಜೀವನಕ್ಕೆ ಪ್ರೋತ್ಸಾಹಿಸುವುದು ಎಲ್ಲರ ಜವಾಬ್ದಾರಿಯಾದಾಗ ದೇಶ ಅಭಿವೃದ್ಧಿಶೀಲದಿಂದ ಅಭಿವೃದ್ಧಿಯೆಡೆಗೆ ಸಾಗಲು ಸಹಾಯವಾಗುತ್ತದೆ ಎಂದು ತಿಳಿಸಬಹುದು.

ಶ್ರೀ. ಭೈರಪ್ಪ ಹಾಲಪ್ಪಗೋಳ
ಉಪನ್ಯಾಸಕರು,
ಮೌಲಾನಾ ಅಬುಲ ಕಲಾಂ ಆಝಾದ
ಬಿಎಸ್‌ಡಬ್ಲ್ಯೂ/ಎಮ್‌ಎಸ್‌ಡಬ್ಲ್ಯೂ
ಮಹಾವಿದ್ಯಾಲಯ, ನಣದಿ

# ವಿಶ್ವ ಓಜೋನ್ ದಿನ

ಪ್ರತಿ ವರ್ಷ ಸೆಪ್ಟೆಂಬರ್ 16 ರಂದು ವಿಶ್ವ ಓಜೋನ್ ದಿನವನ್ನು ಆಚರಿಸಲಾಗುತ್ತದೆ. ಓಜೋನ್ ಪದರದ ಸವಕಳಿಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಮತ್ತು ಅದನ್ನು ಸಂರಕ್ಷಿಸಲು ಸಂಭವನೀಯ ಪರಿಹಾರಗಳನ್ನು ಹುಡುಕಲು ಇದನ್ನು ಆಚರಿಸಲಾಗುತ್ತದೆ. ಈ ದಿನ ಹಲವಾರು ಶಾಲಾ ಕಾಲೇಜುಗಳಲ್ಲಿ ಈ ದಿನದ ಮಹತ್ವ ತಿಳಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ವಿದ್ಯಾರ್ಥಿಗಳಿಗೆ ಈ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ಮಾಡಲಾಗುತ್ತದೆ.

ಭೂಮಿಯ ವಾಯುಮಂಡಲದಲ್ಲಿ ಓಜೋನ್ ಪದರ ಅಥವಾ ಅನಿಲದ ಸೂಕ್ಷ್ಮ ಪದರವಾದ ಓಜೋನ್ ಗುರಾಣಿ ಎಂದೂ ಕರೆಯಲ್ಪಡುತ್ತದೆ. ಇದು ಸೂರ್ಯನ ಹೆಚ್ಚಿನ ನೇರಳಾತೀತ ಕಿರಣಗಳನ್ನು ಹೀರಿಕೊಳ್ಳುತ್ತದೆ. ಈ ಕಿರಣಗಳು ಹಲವಾರು ಚರ್ಮ ರೋಗಗಳಿಗೆ ಕಾರಣವಾಗಬಹುದು. ಸೂರ್ಯನ ಬೆಳಕು ಇಲ್ಲದೆ ಭೂಮಿಯ ಮೇಲಿನ ಜೀವನ ಸಾಧ್ಯವಿಲ್ಲ. ಆದರೆ ನಾವು ನಮ್ಮ ದಿನನಿತ್ಯದಲ್ಲಿ ಸಾಮಾನ್ಯವಾಗಿ ಬಳಸುವ ಹಲವಾರು ರಾಸಾಯನಿಕಗಳು ಓಜೋನ್ ಪದರಕ್ಕೆ ಅತ್ಯಂತ ಹಾನಿಕಾರಕವೆಂದು ತಿಳಿದಿದೆ.

**ವಿಶ್ವ ಓಜೋನ್ ದಿನದ ಇತಿಹಾಸ:**

ಡಿಸೆಂಬರ್ 19, 1994 ರಂದು, ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಸೆಪ್ಟೆಂಬರ್ 16 ರಂದು ಓಜೋನ್ ಪದರದ ಸಂರಕ್ಷಣೆಗಾಗಿ ಅಂತರರಾಷ್ಟ್ರೀಯ ದಿನವನ್ನು ಘೋಷಿಸಿತು. 1987 ರಲ್ಲಿ ಓಜೋನ್ ಪದರವನ್ನು ಖಾಲಿ ಮಾಡುವ ವಸ್ತುಗಳ ಮೇಲಿನ ಮಾಂಟ್ರಿಯಲ್ ಪ್ರೋಟೋಕಾಲ್ಗೆ ಸಹಿ ಹಾಕಲಾಯಿತು.

ಸೆಪ್ಟೆಂಬರ್ 16, 1987 ರಂದು, ವಿಶ್ವಸಂಸ್ಥೆ ಮತ್ತು ಇತರ 45 ದೇಶಗಳು ಮಾಂಟ್ರಿಯಲ್ ಶಿಷ್ಟಾಚಾರಕ್ಕೆ ಸಹಿ ಹಾಕಿದವು. ಪ್ರತಿ ವರ್ಷ, ಈ ದಿನವನ್ನುಓಜೋನ್ ಪದರದ ಸಂರಕ್ಷಣೆಗಾಗಿ ಅಂತರರಾಷ್ಟ್ರೀಯ ದಿನವೆಂದು ಆಚರಿಸಲಾಗುತ್ತದೆ.

ಓಜೋನ್ ಪದರದ ಸವಕಳಿಗೆ ಕಾರಣವಾಗುವ ವಸ್ತುಗಳ ಉತ್ಪಾದನೆಯನ್ನು ಕಡಿಮೆ ಮಾಡುವ ಮೂಲಕ ಓಜೋನ್ ಪದರವನ್ನು ರಕ್ಷಿಸುವುದು ಮಾಂಟ್ರಿಯಲ್ ಶಿಷ್ಟಾಚಾರದ ಉದ್ದೇಶವಾಗಿದೆ.

**ವಿಶ್ವ ಓಜೋನ್ ದಿನ 2022 ಥೀಮ್:**

"ಭೂಮಿಯ ಮೇಲಿನ ಜೀವವನ್ನು ರಕ್ಷಿಸುವ ಜಾಗತಿಕ ಸಹಕಾರ" ಎಂಬುದು ವಿಶ್ವ ಓಜೋನ್ ದಿನ 2022 ರ ಘೋಷಣೆಯಾಗಿದೆ. ಈ ವರ್ಷ ನಾವು 37 ವರ್ಷಗಳ ಜಾಗತಿಕ ಓಜೋನ್ ಪದರ ರಕ್ಷಣೆಯ ದಿನವನ್ನಾಗಿ ಆಚರಿಸುತ್ತೇವೆ.

**ಓಜೋನ್ ಪದರ ಎಂದರೇನು?:**

ಓಜೋನ್ ಪದರವು ಹೆಚ್ಚಿನ ಓಜೋನ್ ಸಾಂದ್ರತೆಯನ್ನು ಹೊಂದಿರುವ ವಾತಾವರಣದ ಒಂದು ಭಾಗವಾಗಿದೆ. ಓಜೋನ್ ಮೂರು ಆಮ್ಲಜನಕ ಪರಮಾಣುಗಳು $O_3$ ನಿಂದ ಮಾಡಲ್ಪಟ್ಟ ಅನಿಲವಾಗಿದೆ. ಓಜೋನ್ ಪದರವು ಎಲ್ಲಿದೆ ಎಂಬುದರ ಆಧಾರದ ಮೇಲೆ ಅದು ಜೀವಕ್ಕೆ ಹಾನಿ ಮಾಡುತ್ತದೆ ಅಥವಾ ಭೂಮಿಯ ಮೇಲಿನ ಜೀವವನ್ನು ರಕ್ಷಿಸುತ್ತದೆ.

ಹೆಚ್ಚಿನ ಓಜೋನ್ ವಾಯುಮಂಡಲದೊಳಗೆ ಉಳಿಯುತ್ತದೆ ಮತ್ತು ಅದು ಗುರಾಣಿಯಾಗಿ ಕಾರ್ಯನಿರ್ವಹಿಸುತ್ತದೆ. ಸೂರ್ಯನ ಹಾನಿಕಾರಕ ನೇರಳಾತೀತ ವಿಕಿರಣದಿಂದ ಭೂಮಿಯ ಮೇಲ್ಮೈಯನ್ನು ರಕ್ಷಿಸುತ್ತದೆ. ಈ ಗುರಾಣಿ ದುರ್ಬಲವಾಗಿದ್ದರೆ, ನಾವೆಲ್ಲರೂ ದುರ್ಬಲಗೊಂಡ ಪ್ರತಿರಕ್ಷಣಾ ವ್ಯವಸ್ಥೆಗಳು, ಕಣ್ಣಿನ ಪೊರೆ ಮತ್ತು ಚರ್ಮದ ಕ್ಯಾನ್ಸರ್‌ಗೆ ಹೆಚ್ಚು ಒಳಗಾಗುತ್ತೇವೆ.

**ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ**




**ನವರಾತ್ರಿ ಹಬ್ಬದ ಪ್ರಯುಕ್ತ ಜೊಲ್ಲೆ ಗ್ರೂಪ್ ವತಿಯಿಂದ ಆಯೋಜಿಸಿದ್ದ ದಾಂಡಿಯ ಕಾರ್ಯಕ್ರಮದ ವಿವಿಧ ದೃಶ್ಯಗಳು**





**ಸ್ವಾಗತಿಸುತ್ತಿರುವುದು**

ಜನಸ್ಪಂದನ ಕಾರ್ಯಕ್ರಮಕ್ಕೆ ಆಗಮಿಸಿದ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಅಲ್ಪ ಸಂಖ್ಯಾತ ವ್ಯವಹಾರಗಳ ಇಲಾಖೆಯ ಸಚಿವರಾದ ಶ್ರೀಮತಿ ಸ್ಮೃತಿ ಇರಾನಿ ಅವರನ್ನು ಮುಜರಾಯಿ, ಹಜ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಯವರು ಆತ್ಮೀಯವಾಗಿ ಸ್ವಾಗತಿಸುತ್ತಿರುವುದು.



**ಶಿಕ್ಷಕರ ದಿನಾಚರಣೆ**

ನಿಪ್ಪಾಣಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ವತಿಯಿಂದ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಜೊಲ್ಲೆ ದಂಪತಿಗಳು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಿರುವುದು.




**ಉದ್ಘಾಟನೆ**

ಭಿವಶಿ ಗ್ರಾಮದಲ್ಲಿ ಪ್ರಧಾನಿಗಳ ಮಹತ್ವಾಕಾಂಕ್ಷೆಯ ಯೋಜನೆಯಾದ ಆಯುಷ್ಮಾನ್ ಭಾರತ ಪ್ರಧಾನಮಂತ್ರಿ ಆರೋಗ್ಯ ಕಾರ್ಡ್ ವಿತರಣಾ ಶಿಬಿರವನ್ನು ಜೊಲ್ಲೆ ದಂಪತಿ ದೀಪ ಬೆಳಗಿಸುವ ಮೂಲಕ ಉದ್ಘಾಟಿಸುತ್ತಿರುವ ದೃಶ್ಯ.



**ಚಾಲನೆ ನೀಡುತ್ತಿರುವುದು**

ಶ್ರೀ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಇದರ 2022-23 ನೇ ಸಾಲಿನ ಕಬ್ಬು ನುರಿಸುವ ಹಂಗಾಮಿನ ಬಾಯ್ಲರ್ ಪೂಜೆಯನ್ನು, ನೀಡಸೋಸಿ ಸಿದ್ದ ಸಂಸ್ಥಾನ ಮಠದ ಪ.ಪೂ. ಶ್ರೀ ಮನ್ನಿರಂಜನ ಜಗದ್ಗುರು ಪಂಚಮ ಶಿವಲಿಂಗೇಶ್ವರ ಮಹಾಸ್ವಾಮಿಜಿಗಳ ದಿವ್ಯ ಸಾನಿಧ್ಯದಲ್ಲಿ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಅವರು ಪೂಜೆ ಸಲ್ಲಿಸುವುದರ ಮೂಲಕ ಚಾಲನೆ ನೀಡಿದರು.



**ಚೆಕ್ ವಿತರಣೆ**

ಶ್ರೀ ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ್) ಬಬಲೇಶ್ವರ ಶಾಖೆಯ ಶಾಖಾ ಸಲಹಾ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಬಬಲೇಶ್ವರದ ದಿ. ಶ್ರೀ ಸಂಗಪ್ಪ ಕಲ್ಲಪ್ಪ ಕೊಕರೆ ಅವರು ಅಕಾಲಿಕ ನಿಧನರಾಗಿದ್ದರಿಂದ, ಅವರ ವಾರಸುದಾರರಾದ ಶ್ರೀಮತಿ ಮಧು ಸಂಗಪ್ಪ ಕೊಕರೆ ಅವರಿಗೆ 10 ಲಕ್ಷ ರೂಪಾಯಿಗಳ ಮೊತ್ತದ ವಿಮಾ ಚೆಕ್‌ನ್ನು ಚಿಕ್ಕೋಡಿ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆಯವರು ವಿತರಿಸುತ್ತಿರುವುದು.



**ದ್ವಿಚಕ್ರ ವಾಹನ ವಿತರಣೆ**

ವಿಜಯನಗರದ ಜಿಲ್ಲಾ ಕ್ರೀಡಾಂಗಣದಲ್ಲಿ 24 ವಿಕಲಚೇತನರಿಗೆ ದ್ವಿಚಕ್ರ ವಾಹನಗಳನ್ನು ಮುಜರಾಯಿ, ಹಜ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಯವರು ವಿತರಿಸುತ್ತಿರುವುದು.



**ಸಂಚಾರಿ ಪಶು ಆಸ್ಪತ್ರೆ**

ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಭಿವಶಿ ಗ್ರಾಮದಲ್ಲಿ "ಸಂಚಾರಿ ಪಶು ಆಸ್ಪತ್ರೆ" ವಾಹನಕ್ಕೆ ಜೊಲ್ಲೆ ದಂಪತಿ ಪೂಜೆ ಸಲ್ಲಿಸಿ, ಲೋಕಾರ್ಪಣೆ ಮಾಡುತ್ತಿರುವ ದೃಶ್ಯ.



**ಸತ್ಕಾರ**

ಜೈನ ಧರ್ಮದ ಪರಮೋಚ್ಚ ಪವಿತ್ರ ತೀರ್ಥ ಕ್ಷೇತ್ರ ತೀರ್ಥರಾಜ ಸಮ್ಮೇದ ಶಿಖರಜಿಯಲ್ಲಿ ಚಾತುರ್ಮಾಸ ಆಚರಿಸುತ್ತಿರುವ ಪರಮ ಪೂಜ್ಯರು, ಸಂಸ್ಕಾರ ಶಿರೋಮಣಿ, ಆಚಾರ್ಯ ರತ್ನ ಶ್ರೀ 108 ಮುನಿ ಕುಲರತ್ನ ಭೂಷಣ ಮಹಾರಾಜ ಆಶೀರ್ವಾದ ಪಡೆದ ಜೊಲ್ಲೆ ದಂಪತಿ ಸತ್ಕಾರ ಸ್ವಕರಿಸುತ್ತಿರುವ ದೃಶ್ಯ.